MVC No. 124/2021 PW-1

<u>ದಿನಾಂಕ **13.02.2025** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆಃಅರ್ಜಿದಾರರ ಪರ ಶ್ರೀ ಹೆಚ್ ಕೆ ಜಿ ವಕೀಲರಿಂದಃ</u>

ಸಾಕ್ಷಿ ಪ್ರಮಾಣ ಪತ್ರದಲ್ಲಿ ತಿಳಿಸಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ ಅದನ್ನು ನನ್ನ ಸಾಕ್ಷ್ಯವೆಂದು ಪರಿಗಣಿಸಲು ಕೋರಿಕೊಳ್ಳುತ್ತೇನೆ.

<u>ಪಾಟೀ ಸವಾಲು ಃ ಎದುರುದಾರರಾದ ಆರ್ **2** ಪರ ಶ್ರೀ ಎಸ್ ವೈ ಎಸ್ ವಕೀಲರಿಂದ ಃ</u>

3 ನೇ ವ್ಯಕ್ತಿಗೆ ಪಾಲಿಸಿಯನ್ನು ನಾನು ನನ್ನ ವಾಹನಕ್ಕೆ ಪಡೆದುಕೊಂಡಿದ್ದೆ ಎಂದರೆ ನಿಜ. ನನ್ನ ವಾಹನ ಜಖಂ ಗೆ Zero Valuation ಇತ್ತು ಎಂದರೆ ನಿಜ. ಅಪಘಾತವಾಗುವುದಕ್ಕಿಂತ ಮುಂಚೆ ನನ್ನ ವಾಹನದ ಭಾವಚಿತ್ರವನ್ನು ಹಾಜರು ಪಡಿಸಿಲ್ಲ. ವಾಹನ 2014 ರ ಮಾದರಿಯಾಗಿತ್ತು. 8-9 ವರ್ಷದಿಂದ ವಾಹನ ಚಾಲನೆ ಮಾಡಿದ್ದರಿಂದ ವಾಹನ ಸವಕಲು ಆಗಿತ್ತು ಎಂದರೆ ನಿಜ. ವಾಹನದ ಸರ್ವೆ ವರದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ವಾಹನ ಜಖಂ ಆದ ಬಗ್ಗೆ ಅಂತಿಮ ವರದಿಯಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿಯು ನಾನು ಹೇಳಿದ್ದೆ ಅವರು ಮಾಡಿಲ್ಲ ಎಂದು ನುಡಿಯುತ್ತಾರೆ. ವಾಹನದ ಜಖಂ ಬಿಲ್ಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸುಳ್ಳು. ನಾನು ಅಂದಾಜು ವೆಚ್ಚ ಬಿಲ್ಲನ್ನು ಮಾತ್ರ ಹಾಜರುಪಡಿಸಿರುತ್ತೇನೆಂದರೆ ಸುಳ್ಳು. ಆದ್ದರಿಂದ ಸರ್ವೇ ವರದಿಯನ್ನು ತಯಾರಿಸಿದವರನ್ನು ಸಾಕ್ಷಿ ಮಾಡಿಸುತ್ತಿಲ್ಲ ಎಂದರೆ ಸುಳ್ಳು. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಹಾಕಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ ಹೇ ಕೇ ಸ ಓ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.